ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ ೧೭ನೇ ಜನವರಿ ೧೯೮೪ ಪುಷ್ಯ ೨೭, ೧೯೦೫ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ, ೧೧ ಘಂಟೆ ೫ ನಿಮಿಷಕ್ಕೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಡಿ. ಬಿ ಚಂದ್ರೇಗೌಡ.--ಪೀಠವನ್ನು ಅಲಂಕರಿಸಿದ್ದರು)]

(ಪ್ರಶ್ನೋತ್ತರಗಳು)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿ ಮಾತಿನ ಉತ್ತರಗಳು.

ಶಿರಾ ತಾಲ್ಲೂಕಿನಲ್ಲಿ ನೀರಿನ ಸೌಲಭ್ಯವನ್ನು ಒದಗಿಸಿದ ನೀರಾವರಿ ತೆರಿಗೆ ವಸೂಲಾತಿ ಮಾಡಿರುವ ಬಗ್ಗೆ.

೮. ಶ್ರೀ ಪಿ. ಮೂಡ್ಲೇಗೌಡ (ಶಿರಾ) —ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಶಿರಾ ತಾಲ್ಲೂಕಿನಲ್ಲಿ ಕೆಲವು ಒಡ್ಡುಗಳು ಮತ್ತು ಕೆರೆಗಳು ಒಡೆದು ರೈತರಿಗೆ ನೀರಿನ ಸೌಲಭ್ಯ ಒದಗದೇ ಇದ್ದರೂ ನೀರಾವರಿ ತೆರಿಗೆಯನ್ನು ವಸೂಲು ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ :

ಆ) ಹಾಗಾದರೆ, ಈ ವಿಚಾರಕ್ಕೊಳಪಟ್ಟ ಗ್ರಾಮಗಳ ಸಂಖ್ಯೆ ಹಾಗೂ ಎಷ್ಟು ಎಕರೆ ಜಮೀನಿನಿಂದ ಈ ರೀತಿ ತೆರಿಗೆ ವಸೂಲಿ ಮಾಡುತ್ತಿದ್ದಾರೆ ?

ಇ) ಇದನ್ನು ಕ್ರಮ ಬದ್ಧಗೊಳಿಸಲು ಸರ್ಕಾರದವರ ನಿಲುವೇನು ? ನೀರಿನ ಸೌಲಭ್ಯ ಒದಗಿಸುವವರೆವಿಗೂ ಈ ಸಾಲಿನಿಂದಲೇ ನೀರಿನ ತೆರಿಗೆ ವಸೂಲಾತಿಯನ್ನು ನಿಲ್ಲಿಸುವಿರಾ ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಪಿ. ಮೂಡ್ಲೇಗೌಡ.—ಶಿರಾ ತಾಲ್ಲೂಕಿನಲ್ಲಿ ಸುಮಾರು ೮-೧೦ ಹಳ್ಳಿಗಳಲ್ಲಿ ಕೆರೆಗಳ ಒಡ್ಡುಗಳು ಒಡೆದು ಹೋಗಿದ್ದರೂ ಇವುಗಳ ರಿಪೇರಿಯ ಕೆಲಸವನ್ನು ರೆವಿನ್ಯೂ ಡಿಪಾರ್ಟ್‌ಮೆಂಟಿನವರಾಗಲೀ, ಕಾಮಗಾರಿ ಇಲಾಖೆಯವರಾಗಲೀ ಮಾಡಿಸುತ್ತಿಲ್ಲ. ಕೆರೆಗಳಲ್ಲಿ ನೀರೂ ನಿಲ್ಲದಿದ್ದರೂ ಸರ್ಕಾರದವರು ನೀರಾವರಿ ತೆರಿಗೆಯನ್ನು ವಸೂಲು ಮಾಡುತ್ತಿರುವುದು ಶೋಚನೀಯ. ಮಾನ್ಯ ಮಂತ್ರಿಗಳು ಇದನ್ನು ತಿಳಿದುಕೊಂಡು ಇದಕ್ಕೆ ಸರಿಯಾದ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಆರ್.ಎನ್. ಲಕ್ಷ್ಮೀಪತಿ.--ನಾವು ಯಾವ ಕಡೆಯಲ್ಲಿ ನೀರನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ ಅಂಥ ಕಡೆ ತೆರಿಗೆಯನ್ನು ವಸೂಲು ಮಾಡುತ್ತಿಲ್ಲ. ತಾವು ಹೇಳುವ ರೀತಿಯಲ್ಲಿ ನೀರನ್ನು ಕೊಡದೆ

ತೆರಿಗೆಯನ್ನು ವಸೂಲು ಮಾಡಿರುವುದು ಏನಾದರೂ ಇದ್ದರೆ ಅದನ್ನು ತಾವು ನಮ್ಮ ಗಮನಕ್ಕೆ ತಂದರೆ ಇಲಾಖೆಯ ಮೂಲಕ ಆದೇಶವನ್ನು ಕೊಟ್ಟು ತೆರಿಗೆಯನ್ನು ವಸೂಲು ಮಾಡಬೇಡಿ ಎಂದು ಹೇಳುತ್ತೇವೆ.

ಶ್ರೀ ಪಿ. ಮೂಡ್ಲೇಗೌಡ.--ಬೊಮ್ಮಸಂದ್ರ, ಬಸವನಹಳ್ಳಿ, ಗಂಡಿ ಹಳ್ಳಿ, ಹೊಸಹಳ್ಳಿಗಳ ಕೆರೆಗಳು ಒಡ್ಡುಗಳು ಒಡೆದು ಹೋಗಿರುವುದರಿಂದ ಇಲ್ಲಿ ತಾವು ತೆರಿಗೆಯನ್ನು ವಸೂಲು ಮಾಡದಂತೆ ಆದೇಶವನ್ನು ಕೊಡಬೇಕು.

ಶ್ರೀ ಆರ್. ಎನ್. ಲಕ್ಷ್ಮೀಪತಿ --ಎಲ್ಲೆಲ್ಲಿ ಕೆರೆಗಳ ಒಡ್ಡುಗಳು ಒಡೆದು ಹೋಗಿವೆ, ಎಲ್ಲೆಲ್ಲಿ ರಿಪೇರಿಯ ಕೆಲಸಗಳು ನಡೆದಿಲ್ಲ, ಎಲ್ಲೆಲ್ಲಿ ಬೆಳೆಗಳಿಗೆ ನಾವು ನೀರನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ ಅಲ್ಲಿ ರಿಪೇರಿಯ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ, ಮತ್ತು ನೀರನ್ನು ಕೊಟ್ಟ ನಂತರ ತೆರಿಗೆಯನ್ನು ವಸೂಲು ಮಾಡುತ್ತೇವೆ.

ಅಧ್ಯಕ್ಷರು.--ಮಾನ್ಯ ಸದಸ್ಯರು ಮಾನ್ಯ ಮಂತ್ರಿಗಳ ಜೊತೆಯಲ್ಲಿ ಕುಳಿತುಕೊಂಡು ಚರ್ಚೆ ಮಾಡಿ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು.

ಶ್ರೀ ಬಿ. ಗಂಗಣ್ಣ.--ನಮ್ಮ ತಾಲ್ಲೂಕಿನ ಕಳಂಬೆಳ್ಳದ ಕೆರೆ ಒಡೆದು ಹೋಗಿ, ಬೆಳೆಗಳಿಗೆ ನೀರು ಇಲ್ಲದೆ ಬಹಳ ಲುಕ್ಸಾನು ಆಗಿದೆ. ಆದರೂ ಸರ್ಕಾರದವರು ರೈತರಿಂದ ತೆರಿಗೆಯನ್ನು ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ ? ತೆರಿಗೆ ವಸೂಲು ಮಾಡುವುದನ್ನು ನಿಲ್ಲಿಸುತ್ತೀರಾ ?

ಶ್ರೀ ಆರ್. ಎನ್. ಲಕ್ಷ್ಮೀಪತಿ --ಒಡ್ಡುಗಳು ಒಡೆದು ಹೋದ ಕಾಲದಲ್ಲಿ ಬೆಳೆಗಳಿಗೆ ನೀರನು ಕೊಡುವುದಕ್ಕಾಗುವುದಿಲ್ಲ. ಒಡ್ಡುಗಳನ್ನು ರಿಪೇರಿ ಮಾಡಿ ಬೆಳೆಗಳಿಗೆ ನೀರನ್ನು ಕೊಟ್ಟ ಮೇಲೆ ಮಾತ್ರ ನೀರಿನ ತೆರಿಗೆಯನ್ನು ವಸೂಲು ಮಾಡುತ್ತೇವೆ.

ಪೂನಾ–ಬೆಂಗಳೂರು ರೋಡಿನಿಂದ ಗಡಹಿಂಗ್ಲಜ ಊರಿಗೆ ಹೋಗುವ ಕರ್ನಾಟಕದ ಗಡಿಯವರೆಗೆ ಇದ್ದ ರಸ್ತೆ ದುರಸ್ತಿ ಬಗ್ಗೆ

೧೨೦. ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).--ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಪಟ್ಟಣದ ಹತ್ತಿರ ಪೂನ–ಬೆಂಗಳೂರು ರಸ್ತೆಯಿಂದ ಕರ್ನಾಟಕದ ಗಡಿಯವರೆಗೆ ಇದ್ದ ರಸ್ತೆಯನ್ನು ರಾಜ್ಯ ರಸ್ತೆ ಮಾಡುವಲ್ಲಿ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಆ) ಈ ರಸ್ತೆಗಾಗಿ ಕಳೆದ ಐದು ವರ್ಷಗಳಲ್ಲಿ ಸರ್ಕಾರದಿಂದ ಖರ್ಚುಮಾಡಿ ಹಣದ ಮೊತ್ತ ಎಷ್ಟು ?

ಇ) ಗಡಿಯಾಚೆಗೆ ಮಹಾರಾಷ್ಟ್ರದಲ್ಲಿ ಇದ್ದ ರಸ್ತೆಯ ಅಗಲದಂತೆ ಕರ್ನಾಟಕದ ರಸ್ತೆಯನ್ನು ಮಾಡಲು ಇಲಾಖೆಯಿಂದ ವರದಿ ತಡಮಾಡುತ್ತಿರುವುದಕ್ಕೆ ಕಾರಣವೇನು ?

ಈ) ಗಡಿಭಾಗದಲ್ಲಿ ಇದ್ದ ಈ ರಸ್ತೆಯನ್ನು ರಾಜ್ಯಪುನರ್ರಚನೆಯ ದೃಷ್ಟಿಯಿಂದ ಮೇಲ್ಕಟ್ಟಿಗೆ ಏರಿ ಸಂವುದು ಸರಕಾರದವರ ಗಮನಕ್ಕೆ ಬಾರದೇ ಇರುವುದು ನಿಜವೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).--

ಅ. ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ೧,೨೫,೨೪೬–೦೦ ರೂಪಾಯಿಗಳು.

ಇ) ಇದನ್ನು ಗಡಿ ಸುಧಾರಣಾ ಯೋಜನೆಯಲ್ಲಿ ಸೇರಿಸಲಾಗಿದೆ. ಆರ್ಥಿಕ ಪರಿಸ್ಥಿತಿಗನುಗುಣವಾಗಿ ಹಂತ ಹಂತವಾಗಿ ಈ ಕೆಲಸವನ್ನು ತೆಗೆದುಕೊಳ್ಳಲಾಗುವುದು.

ಈ) ಇಲ್ಲ.